www.prepp.in

Prepp
Your Personal Exams Guide

PAPER-III
KANNADA

Signature and Name of Invigilator

1. (Signature) _____
   (Name) _____
2. (Signature) _____
   (Name) _____

OMR Sheet No. : .....
(To be filled by the Candidate)

Roll No. | | | | | | | | |
(In figures as per admission card)

Roll No._____
(In words)

D 2 1 1 4

Time : **2 ½** hours] [Maximum Marks : **150**

Number of Pages in this Booklet : **16**

Number of Questions in this Booklet : **75**

Instructions for the Candidates

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   Example : Ⓐ Ⓑ ● Ⓓ
   where (C) is the correct response.
5. Your responses to the items are to be indicated in the **OMR Sheet given inside the Booklet only.** If you mark at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means such as change of response by scratching or using white fluid, you will render yourself liable to disqualification.
9. You have to return the test question booklet and Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry original question booklet and duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचहत्तर बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है ।
   उदाहरण : Ⓐ Ⓑ ● Ⓓ
   जबकि (C) सही उत्तर है ।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर मूल प्रश्न-पुस्तिका तथा OMR पत्रक की डुप्लीकेट प्रति अपने साथ ले जा सकते हैं ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई नकारात्मक अंक नहीं हैं ।**

www.prepp.in

Prepp
Your Personal Exams Guide

KANNADA

Paper – III

Note : This paper contains **seventy five (75)** objective type questions of **two (2)** marks each. **All** questions are compulsory.

ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :

1. 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ' ಎಂಬ ಸಾಲು ಇರುವ ಕೃತಿ :

(A) ಕವಿರಾಜಮಾರ್ಗ (B) ಪಂಪ ಭಾರತ

(C) ವಡ್ಡಾರಾಧನೆ (D) ಧರ್ಮಾಮೃತ

2. 'ಪಂಪಾ ಶತಕ' ದ ಕರ್ತೃ :

(A) ಅಕ್ಕಮಹಾದೇವಿ (B) ಸಿದ್ಧರಾಮ

(C) ಬಸವಣ್ಣ (D) ಹರಿಹರ

3. ಇವರಲ್ಲಿ ಶಾಸ್ತ್ರಗ್ರಂಥವನ್ನು ರಚಿಸಿದವರು :

(A) ನಾಗವರ್ಮ-1 (B) ನಾಗಚಂದ್ರ

(C) ನಯಸೇನ (D) ಜನ್ನ

4. ಪಂಪಭಾರತದಲ್ಲಿ ನಿರೂಪಣೆಗೊಂಡಂತೆ ಕರ್ಣನ ಜನ್ಮ ವೃತ್ತಾಂತವನ್ನು ದುರ್ಯೋಧನನಿಗೆ ತಿಳಿಸಿದವರು :

(A) ಗಾಂಧಾರಿ (B) ಸತ್ಯಂತಪ

(C) ಕೃಷ್ಣ (D) ದೂರ್ವಾಸ

5. 'ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ' ಎಂಬ ಮಾತಿನಲ್ಲಿ ಕಾಗೆಯು ಯಾರನ್ನು ಪ್ರತಿನಿಧಿಸುತ್ತದೆ ?

(A) ಮಾರಿದತ್ತ (B) ಯಶೋಧರ

(C) ಚಂದ್ರಮತಿ (D) ಅಮೃತಮತಿ

6. 'ಬೇಲೂರಿನ ಶಿಲಾಬಾಲಿಕೆಯರು' ಕವನವನ್ನು ಬರೆದ ಕವಿ :

(A) ಸಿದ್ಧಲಿಂಗಯ್ಯ (B) ಪು.ತಿ.ನ.

(C) ಡಿ.ವಿ.ಜಿ. (D) ಮಧುರಚೆನ್ನ

7. ಬುದ್ಧನ ಕೊನೆಯ ದಿನವನ್ನು ಕುರಿತ ಕಾವ್ಯ :

(A) ಬುದ್ಧಚರಿತೆ (B) ವೈಶಾಖಿ

(C) ಸೌಂದರಾನಂದ (D) ಗೊಲ್ಗೊಥಾ

www.prepp.in

Prepp
Your Personal Exams Guide

8. 'ಬರಿಗೊಡಗಳಿಗೆ ಸಮಾಧಾನ ಹೇಳುತ್ತಿದೆ ನೀರಿಲ್ಲದ ನಲ್ಲಿ' ಈ ಸಾಲು ಬರೆದ ಕವಿ :

(A) ಕೆ.ಎಸ್. ನರಸಿಂಹಸ್ವಾಮಿ (B) ಗಂಗಾಧರ ಚಿತ್ತಾಲ

(C) ಶ್ರೀಕೃಷ್ಣ ಆಲನಹಳ್ಳಿ (D) ಚಂದ್ರಶೇಖರ ಕಂಬಾರ

9. ಇದು ವಿಜಯನಗರ ಇತಿಹಾಸವನ್ನು ಕುರಿತ ಕಾದಂಬರಿ :

(A) ಚೆನ್ನಬಸವನಾಯಕ (B) ಸದ್ಧರ್ಮ ವಿಜಯವು

(C) ಹಂಸಗೀತೆ (D) ಕನ್ನಡಿಗರ ಕರ್ಮಕಥೆ

10. 'ಕಿಟ್ಟೆ' ಎಂಬ ಬಾಲಕನ ಪಾತ್ರ ಬರುವ ಕಾದಂಬರಿ :

(A) ಬಂಡಾಯ (B) ಬಿರುಕು

(C) ಕಾಡು (D) ಚಿರಸ್ಮರಣೆ

11. ಇದು ಪಂಜೆ ಮಂಗೇಶರಾಯರು ಬರೆದ ಕತೆ :

(A) ರಂಗಪ್ಪನ ದೀಪಾವಳಿ (B) ನನ್ನ ಚಿಕ್ಕತಾಯಿ

(C) ಅವನತಿ (D) ನಾನು ಕೊಂದ ಹುಡುಗಿ

12. ಇದು ಬಸವಣ್ಣನವರನ್ನು ಕುರಿತ ನಾಟಕ :

(A) ತಲೆದಂಡ (B) ಕಾಕನಕೋಟೆ

(C) ಹರಿಜನ್ವಾರ (D) ಕತ್ತಲೆ ಬೆಳಕು

13. ಪಾರ್ತಿಸುಬ್ಬ ಯಕ್ಷಗಾನ ಕವಿಯ ಕುರಿತು ಸಂಶೋಧನ ಗ್ರಂಥ ಬರೆದವರು :

(A) ಸೇಡಿಯಾಪು ಕೃಷ್ಣಭಟ್ಟ (B) ಮರಿಯಪ್ಪ ಭಟ್ಟ

(C) ಶಿವರಾಮ ಕಾರಂತ (D) ಮುಳಿಯ ತಿಮ್ಮಪಯ್ಯ

14. 'ಇಸಿಲ' ಪದವನ್ನು ಕುರಿತು ಸಂಶೋಧನೆ ಮಾಡಿದವರು :

(A) ಜವರೇಗೌಡ (B) ತೀ. ನಂ. ಶ್ರೀ

(C) ಡಿ. ಎಲ್. ಎನ್. (D) ಆರ್. ಸಿ. ಹಿರೇಮಠ

15. "ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡ ಶರಣರ ನುಡಿಗಡಣವೇ ಕಡೆಗೀಲು" ಎಂದು ಹೇಳಿದ ವಚನಕಾರ :

(A) ಸಿದ್ಧರಾಮ (B) ಜೇಡರ ದಾಸಿಮಯ್ಯ

(C) ಅಲ್ಲಮ ಪ್ರಭು (D) ಅಕ್ಕಮಹಾದೇವಿ

www.prepp.in

Prepp
Your Personal Exams Guide

16. "ಇದನಾದರು ಕೊಡದಿದ್ದರೆ ನಿನ್ನ ಪದ ಕಮಲವ ಭಜಿಸುವುದೆಂತೊ" ಎಂಬುದು ಯಾರ ಉಕ್ತಿ ?

(A) ಶ್ರೀಪಾದರಾಯರು (B) ಪುರಂದರದಾಸರು

(C) ಕನಕದಾಸರು (D) ವಾದಿರಾಜರು

17. 'ಓ ವೊ ಕಾಲಪುರುಷಂಗೆ ಗುಣಮಣಮಿಲ್ಲಂ ಗಡ' ಎಂಬ ಉಲ್ಲೇಖವಿರುವ ಕೃತಿ :

(A) ಶ್ರೀರಾಮಪಟ್ಟಾಭಿಷೇಕ (B) ಅದ್ಭುತ ರಾಮಾಯಣ

(C) ರಾಮಾಶ್ವಮೇಧ (D) ರತ್ನಾವತೀ ಕಲ್ಯಾಣ

18. 'ಕಾಯ ಬಲಿದೊಡೆ ಮಾಯೆ ಬಲಿವುದು ಮಾಯೆ ಬಲಿದೊಡೆ ಛಾಯೆ ಬಲಿವುದು' ಎಂಬ ಮಾತು ಇರುವ ಸಾಹಿತ್ಯ ಕೃತಿ :

(A) ಶೂನ್ಯ ಸಂಪಾದನೆ (B) ಬಸವಣ್ಣನವರ ವಚನಗಳು

(C) ಪ್ರಭುದೇವರ ರಗಳೆ (D) ಪ್ರಭುಲಿಂಗಲೀಲೆ

19. ಅಭಿನವಗುಪ್ತನ ಕೃತಿಯ ಹೆಸರು :

(A) ಧ್ವನ್ಯಾಲೋಕ (B) ಧ್ವನ್ಯಾಲೋಕ ಲೋಚನ

(C) ಕಾವ್ಯ ಪ್ರದೀಪ (D) ರಸಗಂಗಾಧರ

20. 'ಕವಿತ್ವ ಬೀಜಂ ಪ್ರತಿಭಾನಮ್' ಎಂದು ಹೇಳಿದ ಕಾವ್ಯ ಮೀಮಾಂಸಕ :

(A) ಭರತ (B) ಶ್ರೀವಿಜಯ

(C) ಕ್ಷೇಮೇಂದ್ರ (D) ನಾಗವರ್ಮ

21. ಅನೌಚಿತ್ಯ ಪರಿಕಲ್ಪನೆಯ ವ್ಯಾಖ್ಯಾನ ಮಾಡಿದ ಕಾವ್ಯ ಮೀಮಾಂಸಕ :

(A) ವಾಮನ (B) ರಾಜಶೇಖರ

(C) ಕ್ಷೇಮೇಂದ್ರ (D) ವಿಶ್ವನಾಥ

22. ಕೋಲರಿಜ್ ತನ್ನ ಮೀಮಾಂಸಾ ಗ್ರಂಥದಲ್ಲಿ ವ್ಯಾಖ್ಯಾನಿಸಿದ ಮುಖ್ಯತತ್ವ :

(A) ಪ್ರತಿಭಾ ತತ್ವ (B) ಭಾವನಾವೇಶ ತತ್ವ

(C) ಅನುಕರಣ ತತ್ವ (D) ವ್ಯುತ್ಪತ್ತಿ ತತ್ವ

23. ಚಾರಿತ್ರಿಕ ವಿಮರ್ಶೆಯ ಪ್ರಮುಖ ಚಿಂತಕ :

(A) ಲಕಾಚ್ಸ್ (B) ರಿಚರ್ಡ್ಸ್

(C) ಬ್ರೆಕ್ಟ್ (D) ಜಾನಸನ್

www.prepp.in

Prepp
Your Personal Exams Guide

24. ಈಡಿಪಸ್ ಕಾಂಪ್ಲೆಕ್ಸ್ ಎಂಬ ಪರಿಕಲ್ಪನೆಯನ್ನು ಚರ್ಚೆ ಮಾಡಿದವರು :

(A) ಸೊಪೊಕ್ಲಿಸ್ (B) ಸಿಗ್ಮಂಡ್ ಫ್ರಾಯ್ಡ್

(C) ಯುರಿಪಿಡಿಸ್ (D) ಲಂಕೇಶ್

25. ಉಳ್-- ಈ ಪ್ರತ್ಯಯ ಕನ್ನಡ ಭಾಷೆಯ ಯಾವ ಪ್ರಭೇದದಲ್ಲಿ ಕಂಡು ಬರುತ್ತದೆ ?

(A) ನಡುಗನ್ನಡ (B) ಹೊಸಗನ್ನಡ

(C) ಹಳಗನ್ನಡ (D) ಪೂರ್ವದ ಹಳಗನ್ನಡ

26. ಇವು ಕನ್ನಡದ ಅಘೋಷ ಧ್ವನಿಮಾಗಳು :

(A) ಕ ಚ ಟ ತ ಪ (B) ಗ ಜ ಡ ದ ಬ

(C) ಯ ರ ಲ ವ ಸ (D) ಙ ಞ ನ ಣ ಮ

27. ಕೆಲ / ಚಿಲ, ಕಿವಿ / ಚೆವಿ, ಕೆದರು / ಚೆದರು ಇಲ್ಲಿ ಕಾಣುವ ಧ್ವನಿ ವ್ಯತ್ಯಾಸ :

(A) ಸ್ವಚ್ಛಂದ ಪರಿವರ್ತನೆ (B) ಆದಿ ವ್ಯಂಜನ ಲೋಪ

(C) ತಾಲವ್ಯೀಕರಣ (D) ಸೌಲಭ್ಯಾಕಾಂಕ್ಷೆ

28. ಅಭಿವ್ಯಾಪಕ ಮತ್ತು ವ್ಯಾವರ್ತಕ ಎಂಬ ಭೇದವನ್ನು ಹೊಂದಿರುವ ಸರ್ವನಾಮ :

(A) ಪ್ರಥಮ ಪುರುಷ ವಾಚಕ (B) ನಿರ್ದೇಶಕ

(C) ಆತ್ಮಾರ್ಥಕ (D) ಉತ್ತಮ ಪುರುಷ ವಾಚಕ

29. ಇವುಗಳಲ್ಲಿ ನಿಷೇಧಾರ್ಥಕ ಕ್ರಿಯಾಪದ :

(A) ಹಿರಿಯರ ಮಾತುಗಳಿಗೆ ಕಿವಿಗೊಡು (B) ಸುಳ್ಳನ್ನು ಹೇಳನು

(C) ಸತ್ಯವನ್ನೇ ನುಡಿಯುತ್ತಾನೆ (D) ಅವನಿಗೆ ಒಳ್ಳೆಯದಾಗಲಿ

30. ಇವು ಕನ್ನಡದ ತದ್ಧಿತ ಪ್ರತ್ಯಯಗಳು :

(A) ಉದು, ಇಕೆ, (B) ತನ, ವಳ್ಳ,

(C) ಅನ್ನು, ಇಂದ, (D) ದ, ವ,

31. ಮ, ರ, ಭ, ನ, ಯ, ಯ, ಯ – ಈ ಅನುಕ್ರಮ ಗಣವಿನ್ಯಾಸವನ್ನು ಹೊಂದಿರುವ ಛಂದೋರೂಪ :

(A) ಲಲಿತ ರಗಳೆ (B) ಮತ್ತೇ ಭವಿಕ್ರೀಡಿತ

(C) ಸ್ರಗ್ಧರಾ (D) ಪರಿವರ್ಧಿನಿ ಷಟ್ಪದಿ

www.prepp.in

Prepp
Your Personal Exams Guide

32. ಇದು ರುದ್ರಗಣಕ್ಕೆ ಉದಾಹರಣೆ :

(A) ಕರದೊಳಗೆ (B) ಮದನಿಕೆ

(C) ಮಹಾಮನೆ (D) ಕ್ರಮಾತೀತ

33. ಸಾಂಗತ್ಯ ಛಂದಸ್ಸಿನ ಪದ್ಯವೊಂದರಲ್ಲಿರುವ ಒಟ್ಟು ಗಣಗಳ ಸಂಖ್ಯೆ :

(A) 16 (B) 11

(C) 12 (D) 14

34. ಇದು ಮೂಲದಲ್ಲಿ ಅಂಶಗಣ ಪ್ರಧಾನ ಛಂದಸ್ಸು :

(A) ರಗಳೆ (B) ತ್ರಿಪದಿ

(C) ಮಹಾಛಂದಸ್ಸು (D) ಚಂಪಕಮಾಲೆ

35. ಜಾನಪದ ಅಧ್ಯಯನದಲ್ಲಿ ಮಾನವ ಶಾಸ್ತ್ರೀಯ ಸಿದ್ಧಾಂತವನ್ನು ಪ್ರತಿಪಾದಿಸಿದವರು :

(A) ಜೆ.ಎಫ್. ಫ್ಲೀಟ್ (B) ಪೀಟರ್ ಜೆ. ಕ್ಲಾಸ್

(C) ವಿ.ಜೆ. ಪ್ರಾಕ್ (D) ಆಂಡ್ರ್ಯೂ ಲ್ಯಾಂಗ್

36. ಬಸವಪ್ಪ ಶಾಸ್ತ್ರಿಗಳ ಶೂರಸೇನ ಚರಿತ್ರೆಯನ್ನು,

(A) ಮ್ಯಾಕ್‌ಬೆತ್ ನಾಟಕದ ಅರ್ಥಾನುವಾದ ಎನ್ನಬಹುದು.

(B) ಒಥೆಲೋವಿನ ಅನುವಾದವೆಂದು ಕರೆಯಬಹುದು.

(C) ಒಥೆಲೋವಿನ ರೂಪಾಂತರವೆಂದು ಕರೆಯಬಹುದು.

(D) ಹ್ಯಾಮ್ಲೆಟ್‌ನ ರೂಪಾಂತರವೆನ್ನಬಹುದು.

37. ದ್ರಾವಿಡ ಭಾಷೆಗಳಲ್ಲಿ ಲಿಂಗ ವ್ಯವಸ್ಥೆಯ ತಳಹದಿ :

(A) ಬುದ್ಧಿ ಇದ್ದುದು ಮತ್ತು ಇಲ್ಲದುದು (B) ಮಾನವರು, ಮಾನವೇತರರು

(C) ಜೀವ ಇದ್ದುದು ಮತ್ತು ಇಲ್ಲದುದು (D) ಹೆಣ್ಣು ಇಲ್ಲವೆ ಗಂಡು

38. ಕರ್ನಾಟ ವಿಷಯ ಜಾತಿಯಲ್ಲಿ ಒಳಗೊಳ್ಳದ ಛಂದೋರೂಪ :

(A) ಛಂದೋವತಂಸ (B) ಉತ್ಸಾಹ

(C) ಅಕ್ಕರಿಕೆ (D) ಸ್ರಗ್ಧರೆ

39. ಹಲ್ಮಿಡಿ ಶಾಸನವು :

(A) ಕನ್ನಡ-ಪ್ರಾಕೃತ ಭಾಷೆಯಲ್ಲಿದೆ. (B) ಕನ್ನಡ-ಸಂಸ್ಕೃತ ಭಾಷೆಯಲ್ಲಿದೆ.

(C) ಕನ್ನಡ ಭಾಷೆಯಲ್ಲಿದೆ. (D) ಕನ್ನಡ-ತೆಲುಗು ಭಾಷೆಯಲ್ಲಿದೆ.

www.prepp.in

Prepp
Your Personal Exams Guide

40. ದ್ರಾವಿಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ವಿಶೇಷವಾದ ಕೊಡುಗೆ ನೀಡಿದ ಕನ್ನಡ ವಿದ್ವಾಂಸರು :

(A) ಡಿ.ಎಲ್. ನರಸಿಂಹಾಚಾರ್ (B) ಮುಳಿಯ ತಿಮ್ಮಪ್ಪಯ್ಯ

(C) ತೀ.ನಂ. ಶ್ರೀಕಂಠಯ್ಯ (D) ಕೆ.ಜಿ. ಕುಂದಣಗಾರ

ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :

41. ಇವು ಸಾಂಗತ್ಯ ಛಂದಸ್ಸಿನಲ್ಲಿರುವ ಕಾವ್ಯಗಳು.

I. ಭರತೇಶ ವೈಭವ II. ಸಮಯ ಪರೀಕ್ಷೆ

III. ಮೋಹನ ತರಂಗಿಣಿ IV. ಜಗನ್ನಾಥ ವಿಜಯ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II (B) I ಮತ್ತು III

(C) II ಮತ್ತು III (D) II ಮತ್ತು IV

42. ಇವು ಕುಮಾರವ್ಯಾಸನ ಹೇಳಿಕೆಗಳು :

I. ಇವರ್ಗಳಿಂ ಈ ಭಾರತಂ ಲೋಕಪೂಜ್ಯಂ

II. ಸೂಳ್ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್

III. ಭಾಸುರ ವಸಂತ ನೃಪಾಲ ನಡೆದನು ಪಾಂಡುವಿನ ಮೇಲೆ

IV. ಅರಸುಗಳಿಗಿದು ವೀರ, ದ್ವಿಜರಿಗೆ ಪರಮ ವೇದದ ಸಾರ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III (B) III ಮತ್ತು IV

(C) I ಮತ್ತು IV (D) II ಮತ್ತು III

43. ಇವು ಮೂಲಭೂತವಾಗಿ ಮಾತ್ರಾಗಣ ಛಂದೋರೂಪಗಳು.

(I) ಕಂದ (II) ಷಟ್ಪದಿ

(III) ರಗಳೆ (IV) ಅಕ್ಕರ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III (B) I ಮತ್ತು II

(C) III ಮತ್ತು IV (D) I ಮತ್ತು IV

www.prepp.in

Prepp
Your Personal Exams Guide

44. ಇವು ಅರ್ಥ ವಿಸ್ತಾರಕ್ಕೆ ಉದಾಹರಣೆಗಳು :

I. ಆಳು-ಕಾಳು
II. ಅಭ್ಯಾಸ-ಓಲೆ
III. ಎಣ್ಣೆ-ಗವೇಶನ
IV. ಅಪರೂಪ-ಖಂಡಿತ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II
(B) II ಮತ್ತು IV
(C) I ಮತ್ತು III
(D) II ಮತ್ತು III

45. ಇವು ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ರಚಿಸಿದ ಕಾದಂಬರಿಗಳು :

I. ಪುರುಷಾರ್ಥ – ರಕ್ತತರ್ಪಣ
II. ಔದಾರ್ಯದ ಉರುಳಲ್ಲಿ – ವಿಷಚಕ್ರವ್ಯೂಹ
III. ಗಂಗವ್ವ ಮತ್ತು ಗಂಗಾಮಾಯಿ – ನಿಸರ್ಗ
IV. ಭೂಮಿತಾಯಿ – ಅಂತರಂಗ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV
(B) III ಮತ್ತು IV
(C) I ಮತ್ತು II
(D) II ಮತ್ತು III

46. ಇವು ಪ್ರಕೃತಿ ವೈಭವವನ್ನು ವರ್ಣಿಸುವ ಕವಿತೆಗಳು :

I. ಪಕ್ಷಿಕಾಶಿ – ಭೂಮಿಗೀತ
II. ಏಳು ಸುತ್ತಿನ ಕೋಟೆ – ಮಣ್ಣಿನ ಮೆರವಣಿಗೆ
III. ದೇವರು ರುಜು ಮಾಡಿದನು – ತೆಂಕಣ ಗಾಳಿಯಾಟ
IV. ನಿತ್ಯೋತ್ಸವ – ಸುಗ್ಗಿ ಬರುತಿದೆ

ಇವುಗಳಲ್ಲಿ ಸರಿಯಾದ ಉತ್ತರ :

(A) II ಮತ್ತು III
(B) I ಮತ್ತು III
(C) III ಮತ್ತು IV
(D) I ಮತ್ತು IV

47. ಇವು ಬಸವಪ್ಪ ಶಾಸ್ತ್ರಿಗಳ ಅನುವಾದಿತ ನಾಟಕಗಳು :

(I) ಅಭಿಜ್ಞಾನ ಶಾಕುಂತಲ
(II) ರಕ್ತಾಕ್ಷಿ
(III) ಚಂಡ ಕೌಶಿಕ
(IV) ಚೋಕುಮಾರ ಸ್ವಾಮಿ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III
(B) I ಮತ್ತು II
(C) III ಮತ್ತು IV
(D) I ಮತ್ತು IV

www.prepp.in

Prepp
Your Personal Exams Guide

48. ಇವು ಸಂಶೋಧನಾ ಕೃತಿಗಳು.

I. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ – ಸೌಂದರ್ಯ ಮೀಮಾಂಸೆ

II. ಕನ್ನಡ ಸಾಹಿತ್ಯದಲ್ಲಿ ಹಾಸ್ಯ – ಕನ್ನಡದಲ್ಲಿ ಭಾವಗೀತೆ

III. ಭುವನದ ಭಾಗ್ಯ – ಯುಗಧರ್ಮ ಹಾಗೂ ಸಾಹಿತ್ಯ ದರ್ಶನ

IV. ಶಿಲ್ಪ ವಿನ್ಯಾಸ – ಕನ್ನಡ ಸಾಹಿತ್ಯ ರೂಪಗಳು

ಇವುಗಳಲ್ಲಿ ಸರಿಯಾದ ಉತ್ತರ :

(A) II ಮತ್ತು III (B) I ಮತ್ತು II

(C) III ಮತ್ತು IV (D) I ಮತ್ತು IV

49. ದಂಡಿಯು ಕಾವ್ಯಾದರ್ಶದಲ್ಲಿ ಹೇಳಿದ ಎರಡು ಮಾರ್ಗಗಳು.

(I) ವೈದರ್ಭಿ (II) ಗೌಡಿ

(III) ಉತ್ತರಮಾರ್ಗ (IV) ದಕ್ಷಿಣಮಾರ್ಗ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV (B) III ಮತ್ತು IV

(C) II ಮತ್ತು III (D) I ಮತ್ತು II

50. ಇವುಗಳನ್ನು ವೀರಗಲ್ಲು ಶಾಸನಗಳೆಂದು ಕರೆಯಬಹುದು.

I. ಹಲ್ಮಿಡಿ ಶಾಸನ II. ಆತಕೂರು ಶಾಸನ

III. ನಾಗಾಯಿ ಶಾಸನ IV. ಲಕ್ಕುಂಡಿ ಶಾಸನ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV (B) III ಮತ್ತು IV

(C) I ಮತ್ತು II (D) II ಮತ್ತು III

www.prepp.in

Prepp
Your Personal Exams Guide

ಹೇಳಿಕೆ-ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :

51. **ಹೇಳಿಕೆ** : ಧರ್ಮವೆ ಜಯವೆಂಬ ದಿವ್ಯಮಂತ್ರ ಇದರ ಮರ್ಮವನು ತಿಳಿದು ಮಾಡಲಿ ಬೇಕು ತಂತ್ರ.

ವಿವರಣೆ : ಧರ್ಮದ ದಾರಿಯಲ್ಲಿ ನಡೆಯಬೇಕಾದುದು ಮಾನವನ ಕರ್ತವ್ಯ ; ಆದರೆ ಧರ್ಮಾಂಧತೆಯನ್ನು ಹೊಂದಬಾರದು. ಮಾನವ ಧರ್ಮದ ಚೌಕಟ್ಟಿನಲ್ಲಿ ಧರ್ಮದ ಸೂತ್ರಗಳು ಅಳವಡಿಕೆಯಾಗಬೇಕು.

(A) ಹೇಳಿಕೆ ಸರಿ, ವಿವರಣೆಯೂ ಸರಿ
(B) ಹೇಳಿಕೆ ಸರಿ, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆಯೂ ತಪ್ಪು

52. **ಹೇಳಿಕೆ** : ನಾಯ್ಗಿ ಹಾಲುಳ್ಳಡಾವನೂಟಕ್ಕೆ ಯೋಗ್ಯಂ

ವಿವರಣೆ : ನಾಯಿಯ ಹಾಲನ್ನು ಯಾರೂ ಆಹಾರವಾಗಿ ಬಳಸುವುದಿಲ್ಲ

(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ಸರಿ, ವಿವರಣೆ ಸರಿ
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

53. **ಹೇಳಿಕೆ** : ಅಕ್ಕಿಗೊಟ್ಟುಮಡಗೂಳ್ ಉಣ್ಬಂದಮಂ ಪೋಲದೆ.

ವಿವರಣೆ : ಅಕ್ಕಿ ಕೊಟ್ಟು ಎಂಜಲನ್ನು ಉಣ್ಣುತ್ತಾರೆ.

(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ಸರಿ, ವಿವರಣೆ ತಪ್ಪು

54. **ಹೇಳಿಕೆ** : ಧ್ವನಿತವಾದ ಅರ್ಥಸಮುದಾಯದಲ್ಲಿ ರಸಧ್ವನಿಯು, ಅಲಂಕಾರ ಧ್ವನಿಯು ಅಲ್ಲದಿರುವುದಕ್ಕೆ ವಸ್ತುಧ್ವನಿಯೆಂದು ಹೆಸರು.

ವಿವರಣೆ : ಧ್ವನಿ ಎಂದರೆ ರಸಧ್ವನಿಯೂ ಅಲಂಕಾರ ಧ್ವನಿಯೂ ಅಲ್ಲದ 'ವಸ್ತು' ಎನ್ನುವರು.

(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ತಪ್ಪು

55. **ಹೇಳಿಕೆ** : ಬೆಳತೂರ ಪಡುವಣದೆಸೆಯ ಮೊಱಡಿಯೊಳ್ ಪಿರಿಯ ಪನ್ದಿಗೆವಿಟ್ಟೊಡೆ ಪನ್ದಿಯುಂ ನಾಯು ಮೊಡಸತ್ತುವು.

ವಿವರಣೆ : ಬೆಳತೂರಿನ ಪೂರ್ವದಿಕ್ಕಿನ ಕಲ್ಲುಬಂಡೆಗಳ ಸ್ಥಳದಲ್ಲಿ ದೊಡ್ಡಹಂದಿಯೊಡನೆ ಜಗಳವಾದಾಗ ಹಂದಿ ಸತ್ತಿತು.

(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ಸರಿ, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

www.prepp.in

ಬಹು ಆಯ್ಕೆಯ ಜೋಡಣೆಯ ಮಾದರಿ :

56.

a. ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ	i. ಕುಮಾರವ್ಯಾಸ
b. ದುಶ್ಯಾಸನನ ನೊರೆ ನೆತ್ತರಲಿ ನಾದುವೆ ನಿನ್ನ ಮಂಡೆಯ	ii. ಲಕ್ಷ್ಮೀಶ
c. ವೀಣೆಯಿಂ ಗಾನಮಂ ನುಡಿಸುವಂದದೊಳೆನ್ನ ವಾಣಿಯಿಂ ಕವಿತೆಯಂ ಪೇಳಿಸಿದನು	iii. ಶ್ರೀವಿಜಯ
d. ಗುಣಮಿದು ದೋಷಮಿದೆಂಬೀ ಗಣಿದಮನೆತ್ತರಿಗುಮಶ್ರುತ ಪ್ರಕೃತಿಜನಂ	iv. ಪಂಪ
	v. ರಾಘವಾಂಕ

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	v	i	ii	iii
(B)	ii	iii	v	i
(C)	v	i	iv	ii
(D)	iii	ii	i	v

57.

a. ಸಂಕ್ರಾಂತಿ	i. ಶ್ರೀಕಂಠೇಶಗೌಡ
b. ಪ್ರಮೀಳಾರ್ಜುನೀಯ	ii. ಲಂಕೇಶ
c. ರಂಗಭಾರತ	iii. ಚಂದ್ರಶೇಖರ ಕಂಬಾರ
d. ಸಿರಿಸಂಪಿಗೆ	iv. ಶ್ರೀರಂಗ
	v. ಚಂದ್ರಶೇಖರ ಪಾಟೀಲ

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	i	ii	iii	iv
(B)	iv	iii	ii	i
(C)	iii	ii	v	iv
(D)	ii	i	iv	iii

58.

a. ಜನಪದ ವೀರಕಾವ್ಯಗಳು	i. ಚಂದ್ರಕಾಂತ ಕುಸನೂರ
b. ಅಲ್ಲಾವುದ್ದೀನ ದೀಪ	ii. ಜೀ.ಶಂ. ಪರಮಶಿವಯ್ಯ
c. ಯಾತನಾ ಶಿಬಿರ	iii. ಎಸ್.ಜಿ. ನರಸಿಂಹಾಚಾರ್
d. ಜಾನಪದ ಸ್ವರೂಪ	iv. ಎ.ಕೆ. ರಾಮಾನುಜನ್
	v. ಹಾ.ಮಾ. ನಾಯಕ

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	i	ii	iii	iv
(B)	iv	iii	ii	i
(C)	ii	iii	i	v
(D)	i	ii	iv	iii

59.

a.	ಎನ್, ಎವು	i.	ಬಹುವಚನ ಪ್ರತ್ಯಯ
b.	ನ್, ಣ್, ಮ್	ii.	ಸಂಧ್ಯಕ್ಷರಗಳು
c.	ಐ, ಜಾ	iii.	ತದ್ಧಿತ ಪ್ರತ್ಯಯಗಳು
d.	ಅರು, ಗಳು	iv.	ಅನುನಾಸಿಕಗಳು
		v.	ಆಖ್ಯಾತ ವಿಭಕ್ತಿಗಳು

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	i	ii	iii	iv
(B)	v	iv	ii	i
(C)	iv	ii	iii	v
(D)	v	iv	ii	iii

60.

a.	ತರುಲತೆ, ಕೆಂದುಟಿ	i.	ಚತುರ್ಮಾತ್ರಾ ಗಣ
b.	ಕದನ, ಕಾನ	ii.	ರುದ್ರಗಣ
c.	ನಿವಾರ್ಯ, ಅಕಾರ್ಯ	iii.	ಪಂಚಮಾತ್ರಾ ಗಣ
d.	ಮುರುಕುಮನೆ, ದಾರಿಹೋಕ	iv.	ವಿಷ್ಣು ಗಣ
		v.	ಬ್ರಹ್ಮ ಗಣ

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	iv	v	i	ii
(B)	i	ii	iii	iv
(C)	iv	iii	ii	i
(D)	v	iv	iii	ii

61.

a.	ಗಿಳಿವಿಂಡು	i.	ಬಿ. ಎಂ. ಶ್ರೀ.
b.	ಬಿಂಕದ ಸಿಂಗಾರಿ	ii.	ಪು. ತಿ. ನ.
c.	ಹಣತೆ	iii.	ರಾಜರತ್ನಂ
d.	ಅನ್ನದೇವರು	iv.	ಗೋವಿಂದ ಪೈ
		v.	ಬೀಂದ್ರೆ

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	i	ii	iii	iv
(B)	iv	iii	ii	i
(C)	iv	i	ii	v
(D)	v	iv	iii	i

62.

a.	ಆಟ	i.	ಕೊಡಗಿನ ಗೌರಮ್ಮ
b.	ಗ್ರಹಣ	ii.	ಪೂರ್ಣಚಂದ್ರ ತೇಜಸ್ವಿ
c.	ಆಕಾಶ ಮತ್ತು ಬಿಕ್ಕು	iii.	ದೇವನೂರು ಮಹಾದೇವ
d.	ತುಕ್ಕೋಜಿ	iv.	ಯಶವಂತ ಚಿತ್ತಾಲ
		v.	ಯು.ಆರ್. ಅನಂತಮೂರ್ತಿ

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	i	ii	iii	iv
(B)	iv	iii	v	ii
(C)	iv	ii	i	v
(D)	v	iv	iii	ii

63.

a.	ರಾಜಶೇಖರ	i.	ರಸ ರತ್ನಾಕರ
b.	ಭಟ್ಟನಾಯಕ	ii.	ಕಾವ್ಯಮೀಮಾಂಸಾ
c.	ವಿಶ್ವನಾಥ	iii.	ಕಾವ್ಯಾಲಂಕಾರ
d.	ಭಾಮಹ	iv.	ಸಾಹಿತ್ಯದರ್ಪಣ
		v.	ಹೃದಯದರ್ಪಣ

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	i	ii	iv	iii
(B)	iv	i	ii	v
(C)	v	iv	iii	ii
(D)	ii	v	iv	iii

64.

a.	ರವಿಗಂಪುಟ್ಟಿದೊಡನುದ್ಭವವಾಯ್ತು ಅರಿವು	i.	ಹಲ್ಮಿಡಿ ಶಾಸನ
b.	ಮರೆದುಂಪಾರದು ಮೇಲೆ ಪಕ್ಷಿ ನಿವಹಂ	ii.	ದೇಕಬ್ಬಿಯ ಬಿಳತೂರು ಶಾಸನ
c.	ಬರೆದುದೆ ತಾಮ್ರಶಾಸನಂ ಅದೆಯಮೆಧರ್ಮವುರಂ	iii.	ಬೊಪ್ಪಣ್ಣನ ಗೊಮ್ಮಟಸ್ತುತಿ ಶಾಸನ
d.	ಬಟರಿಕುಲದೊನ್ ಅಳುಕದಮ್ಬಪನ್	iv.	ಜಿನವಲ್ಲಭನ ಗಂಗಾಧರಂ ಶಾಸನ
		v.	ನಾಗಾಯಿ ಶಾಸನ

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	ii	iii	iv	i
(B)	iii	ii	i	iv
(C)	iv	iii	ii	i
(D)	v	iv	iii	ii

www.prepp.in

65.

a.	ಚಾರಿತ್ರಿಕ ವಿಮರ್ಶೆ	i.	ಎಡ್ಮಂಡ್ ವಿಲ್ಸನ್
b.	ರೂಪನಿಷ್ಠ ವಿಮರ್ಶೆ	ii.	ಸಿಮೋನ್ ದಿ ಬೊವಾ
c.	ಸ್ತ್ರೀವಾದಿ ವಿಮರ್ಶೆ	iii.	ಆಯ್.ಎ. ರಿಚರ್ಡ್ಸ್
d.	ಮಾರ್ಕ್ಸ್‌ವಾದಿ ವಿಮರ್ಶೆ	iv.	ಆರ್.ಎಸ್. ಕ್ರೇನ್
		v.	ಎಫ್.ಆರ್. ಲೀವಿಸ್

ಇವುಗಳಲ್ಲಿ ಸರಿಯಾದ ಉತ್ತರ :

	a	b	c	d
(A)	i	iii	iv	ii
(B)	iv	iii	ii	i
(C)	i	ii	iii	iv
(D)	v	iv	ii	iii

66. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ಅವಸರ – ಅರ್ಥವಿಸ್ತಾರ
(B) ಶ್ರಾದ್ಧ – ಅರ್ಥಸಂಕೋಚ
(C) ದೇಗುಲ – ಉತ್ತಮಾರ್ಥ ಪ್ರಾಪ್ತಿ
(D) ಆಳು – ಅರ್ಥಾಂತರ

67. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಚಂಡೆ – ತೆಂಕುತಿಟ್ಟು ಯಕ್ಷಗಾನ
(B) ತಾಳ – ಭಾಗವಂತಿಕೆಯವರು
(C) ಜಾಗಟೆ – ಮೂಡಲಪಾಯ
(D) ಮದ್ದಳೆ – ಬಡಗುತಿಟ್ಟು

68. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ಐದು ಮಾತ್ರೆಗಳ ಗಣ – ಪರಿವರ್ಧಿನಿ ಷಟ್ಪದಿ
(B) ಮಾತ್ರಾಗಣ – ಏಳೆ
(C) ಅಂಶಗಣ – ಉತ್ಸಾಹ ರಗಳೆ
(D) ವರ್ಣಗಣ – ಮತ್ತೇಭವಿಕ್ರೀಡಿತ

69. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಕಲಾಸುಂದರಿ – ಕಾವ್ಯ
(B) ಮೋಡಣ್ಣನ ತಮ್ಮ – ಸಣ್ಣಕತೆ
(C) ಸ್ಮೃತಿ ಪಟಲದಿಂದ – ಆತ್ಮಕಥೆ
(D) ಅಂಟಿದ ಅಪರಂಜಿ – ಕಾದಂಬರಿ

www.prepp.in

Prepp
Your Personal Exams Guide

70. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ಮುನ್ನೀರ್ ಬೇನ್ನೀರೆನೆ ಬೆರಸಲಣ್ಣ ತಣ್ಣೀರೊಳವೆ – ನಾಗಚಂದ್ರ

(B) ನೆಲಕಿರಿವೆನೆಂದು ಬಗೆವಿರೆ ಛಲಕಿರಿವೆಂ – ಪಂಪ

(C) ಛಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ – ರನ್ನ

(D) ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ – ನೇಮಿಚಂದ್ರ

ಅನುಕ್ರಮ ಮಾದರಿ ಪ್ರಶ್ನೆಗಳು :

71. ಈ ಕೆಳಗಿನ ಕವಿ ವಾಕ್ಯದಲ್ಲಿ ಸರಿಯಾದ ಪದಾನುಕ್ರಮ ಗುರುತಿಸಿರಿ.

(A) ಸೋದರರೊಳ್ ಸೋದರರಂ ಕಾದಿಸುವುದು ಸುತನ ತಂದೆಯೊಡೆಯೊಳ್ ಬಿಡದುತ್ಪಾದಿಸುವುದು ಕೋಪಮನ್

(B) ಸೋದರರೊಳ್ ಸೋದರರಂ ಬಿಡದುತ್ಪಾದಿಸುವುದು ಕೋಪಮನ್ ಸುತನ ತಂದೆಯೆಡೆಯೊಳ್ ಕಾದಿಸುವುದು

(C) ಸುತನ ತಂದೆಯೆಡೆಯೊಳ್ ಬಿಡದುತ್ಪಾದಿಸುವುದು ಕೋಪಮನ್ ಸೋದರರೊಳ್ ಸೋದರರಂ ಕಾದಿಸುವುದು

(D) ಸೋದರರಂ ಸೋದರರೊಳ್ ಕಾದಿಸುವುದು ತಂದೆಯನ್ ಸುತನೆಡೆಯೊಳ್ ಬಿಡದುತ್ಪಾದಿಸುವುದು ಕೋಪಮನ್

72. ಅನುಕ್ರಮ ಮಾದರಿ : ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ.

(A) ಸಿದ್ಧರಾಮಚರಿತೆ, ಮಧ್ವನಾಮ, ನಂಬಿಯಣ್ಣನ ರಗಳೆ, ರಾಮಧಾನ್ಯಚರಿತೆ.

(B) ಮಧ್ವನಾಮ, ನಂಬಿಯಣ್ಣನ ರಗಳೆ, ರಾಮಧಾನ್ಯಚರಿತೆ, ಸಿದ್ಧರಾಮಚರಿತೆ.

(C) ರಾಮಧಾನ್ಯಚರಿತೆ, ನಂಬಿಯಣ್ಣನ ರಗಳೆ, ಸಿದ್ಧರಾಮಚಾರಿತ್ರ, ಮಧ್ವನಾಮ.

(D) ನಂಬಿಯಣ್ಣನ ರಗಳೆ, ಸಿದ್ಧರಾಮಚಾರಿತ್ರ, ಮಧ್ವನಾಮ, ರಾಮಧಾನ್ಯಚರಿತೆ.

73. (A) ಗ್ರಾಮಾಯಣ, ಇಂದಿರೆ, ಇಜ್ಜೋಡು, ಮಾಧವ ಕರುಣಾ ವಿಲಾಸ.

(B) ಇಜ್ಜೋಡು, ಇಂದಿರೆ, ಮಾಧಮ ಕರುಣಾ ವಿಲಾಸ, ಗ್ರಾಮಾಯಣ.

(C) ಇಂದಿರೆ, ಮಾಧವ ಕರುಣಾ ವಿಲಾಸ, ಇಜ್ಜೋಡು, ಗ್ರಾಮಾಯಣ.

(D) ಗ್ರಾಮಾಯಣ, ಇಂದಿರೆ, ಮಾಧವ ಕರುಣಾ ವಿಲಾಸ, ಇಜ್ಜೋಡು.

74. (A) ದಂಡಿ, ಭರತ, ರಾಜಶೇಖರ, ಮಮ್ಮಟ.

(B) ಭರತ, ದಂಡಿ, ರಾಜಶೇಖರ, ಮಮ್ಮಟ.

(C) ಮಮ್ಮಟ, ದಂಡಿ, ಭರತ, ರಾಜಶೇಖರ.

(D) ಭರತ, ರಾಜಶೇಖರ, ದಂಡಿ, ಮಮ್ಮಟ.

75. ಈ ಕೆಳಗಿನ ಕವಿ ವಾಕ್ಯದಲ್ಲಿ ಸರಿಯಾದ ಪದಾನುಕ್ರಮ ಗುರುತಿಸಿರಿ.

(A) ಬಿರುಗಣ್ಣ ಮಲ್ಲಿಗೆಯೆ ಸರಿಯೆ ನಿನಗೀ ಮೌನ ಕಣ್ಣಿಲ್ಲದವರು ಕಂಡಿಲ್ಲದಿರಲಿ

(B) ಬಿರುಗಣ್ಣ ಮಲ್ಲಿಗೆಯೆ ಕಣ್ಣಿಲ್ಲದವರು ಕಂಡಿಲ್ಲದಿರಲಿ ಸರಿಯೆ ನಿನಗೀ ಮೌನ

(C) ಸರಿಯೆ ನಿನಗೀ ಮೌನ ಬಿರುಗಣ್ಣ ಮಲ್ಲಿಗೆಯೆ ಕಣ್ಣಿಲ್ಲದವರು ಕಂಡಿಲ್ಲದಿರಲಿ

(D) ಕಣ್ಣಿಲ್ಲದವರು ಕಂಡಿಲ್ಲದಿರಲಿ ಬಿರುಗಣ್ಣ ಮಲ್ಲಿಗೆಯೆ ಸರಿಯೆ ನಿನಗೀ ಮೌನ

Space For Rough Work